# ಡಾ. ಸಲೀಂ ಅಲಿ

## ಪದಗಳ ಅರ್ಥ ಬರೆಯಿರಿ. (Write the word Meaning)

ಕುತೂಹಲ = ಅಚ್ಚರಿ, ವಿಸ್ಮಯ
ಪಕ್ಷಿತಜ್ಞ = ಪಕ್ಷಿಗಳ ಬಗ್ಗೆ ತಿಳಿದವನು,
ನಿರ್ಧರಿಸು = ತೀರ್ಮಾನಿಸು, ನಿಶ್ಚಯಿಸು
ಖ್ಯಾತ = ಪ್ರಸಿದ್ಧವಾದ, ಹೆಸರುವಾಸಿಯಾದ,
ಜೀವನ ನಿರ್ವಹಣೆ = ಬದುಕು ಸಾಗಿಸುವುದು
ಧೃತಿಗೆಡು = ಧೈರ್ಯವನ್ನು ಕಳೆದುಕೊಳ್ಳು, ಎದೆಗುಂದು
ಪ್ರಭೇದ = ವಿಭಾಗ, ಪ್ರಕಾರ
ಪ್ರಶಸ್ತಿ = ಗೌರವ ಸೂಚಕವಾದ ಪದವಿ, ಬಿರುದು
ಕರ್ತವ್ಯ = ಮಾಡಬೇಕಾದ ಕೆಲಸ, ಜವಾಬ್ದಾರಿ

## ಅ) ಹೊಂದಿಸಿ ಬರೆಯಿರಿ. (Match the following)

FOR KANNADA

| ಅ | ಬ |
|---|---|
| ಡಬ್ಲ್ಯೂ ಎಸ್ ಮಿಲ್ಲರ್ | ಪ್ರಕೃತಿ ವಿಜ್ಞಾನ ಸಂಘದ ಪಕ್ಷಿ ತಜ್ಞ |
| ಅಮೀರುದ್ದೀನ್ ತಯಾಬ್ಜಿ | ಸಲೀಂಅಲಿಯವರ ಸೋದರಮಾವ |
| ತೆಹ್ಮಿನಾ | ಸಲೀಂ ರವರ ಪತ್ನಿ |
| ಅದಿರಿನ ಗಣಿ | ಬರ್ಮಾ |
| ಬರ್ಲಿನ್ ವಿಶ್ವವಿದ್ಯಾನಿಲಯ | ಜರ್ಮನಿ |

## ಆ) ಒಂದು ವಾಕ್ಯದಲ್ಲಿ ಬರೆಯಿರಿ. (Answer the following questions in one sentence)

೧. ಕಾಡುಗುಬ್ಬಚ್ಚಿಯ ಕುತ್ತಿಗೆಯ ಕೆಳಗೆ ಯಾವ ಬಣ್ಣವಿತ್ತು?
ಉ: ಕಾಡುಗುಬ್ಬಚ್ಚಿಯ ಕುತ್ತಿಗೆಯ ಕೆಳಗೆ ಹಳದಿ ಬಣ್ಣವಿತ್ತು.

೨. ಸಲೀಂ ಅಲಿ ಯಾವಾಗ ಮತ್ತು ಎಲ್ಲಿ ಜನಿಸಿದರು?
ಉ: ಸಲೀಂ ಅಲಿಯವರು ನವೆಂಬರ್ ೧೨, ೧೮೯೬ರಂದು ಮತ್ತು ಮುಂಬಯಿಯಲ್ಲಿ ಜನಿಸಿದರು.

೩. ತೆಹ್ಮಿನಾ ಯಾರು?
ಉ: ತೆಹ್ಮಿನಾ ಸಲೀಂ ಅಲಿಯವರ ಪತ್ನಿ.

೪. ಸಲೀಂ ಅಲಿಯವರು ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಯಾವುದರ ಬಗ್ಗೆ ತರಬೇತಿ ಪಡೆದರು?

ಉ: ಸಲೀಂ ಅಲಿಯವರು ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಪಕ್ಷಿಶಾಸ್ತ್ರದ ಬಗ್ಗೆ ತರಬೇತಿ ಪಡೆದರು.

೫. ಭಾರತದಲ್ಲಿ ಪಕ್ಷಿ ಅಧ್ಯಯನಕ್ಕೆ ನಾಂದಿ ಹಾಡಿದವರು ಯಾರು?

ಉ: ಭಾರತದಲ್ಲಿ ಪಕ್ಷಿ ಅಧ್ಯಯನಕ್ಕೆ ನಾಂದಿ ಹಾಡಿದವರು ಸಲೀಂ ಅಲಿ.

**ಇ) ತಪ್ಪಾಗಿರುವದನ್ನು ಸರಿಪಡಿಸಿ ಬರೆಯಿರಿ. (Correct the sentence)**

೧. ಸಲೀಂ ಅಲಿ ಹತ್ತು ಮಕ್ಕಳಲ್ಲಿ ಮೊದಲನೆಯವರು

ಉ: ಸಲೀಂ ಅಲಿ ಹತ್ತು ಮಕ್ಕಳಲ್ಲಿ ಕೊನೆಯವರು.

೨. ಪ್ರಕೃತಿ ವಿಜ್ಞಾನ ಸಂಸ್ಥೆಯ ಪಕ್ಷಿತಜ್ಞ ಡಬ್ಲ್ಯೂ. ಎಸ್ ಮಿಲ್ಲರ್ಡ

ಉ: ಪ್ರಕೃತಿ ವಿಜ್ಞಾನ ಸಂಸ್ಥೆಯ ಪಕ್ಷಿತಜ್ಞ ಡಬ್ಲ್ಯೂ. ಎಸ್ ಮಿಲ್ಲರ್ಡ

FOR KANNADA
ಕನ್ನಡದಲ್ಲಿ ಇಲ್ಲಿ ಬನ್ನಿ

೩. ಅಮೀರುದ್ದೀನ್ ತಯಾಬ್ಜಿಯವರು ತುಂಬಾ ಬಡವರಾಗಿದ್ದರು.

ಉ: ಅಮೀರುದ್ದೀನ್ ತಯಾಬ್ಜಿಯವರು ತುಂಬಾ ಶ್ರೀಮಂತರಾಗಿದ್ದರು.

**ಈ) ಎರಡು ಮೂರು ವಾಕ್ಯದಲ್ಲಿ ಉತ್ತರಿಸಿರಿ. (Answer the following in two – three sentences)**

೧. ಸಲೀಂ ಅಲಿಯವರಿಗೆ ಪಕ್ಷ ತಜ್ಞರಾಗಬೇಕೆಂದು ಅನಿಸಿದ್ದೇಕೆ?

ಉ: ಸಲೀಂ ಅಲಿಯವರು ಚಿಕ್ಕವರಾಗಿದ್ದಾಗ ಪ್ರಕೃತಿ ವಿಜ್ಞಾನ ಸಂಘದಲ್ಲಿ ಸತ್ತ ಪಕ್ಷಿ ಲೋಕವನ್ನು ನೋಡಿ ಬೆರಗಾದರು. ಪ್ರಪಂಚದಲ್ಲಿ ಅಷ್ಟು ದೊಡ್ಡ ಪಕ್ಷಿ ಲೋಕವಿದೆ ಎಂಬುದನ್ನು ಊಹಿಸಿರಲಿಲ್ಲ. ಆಗ ಅವರಿಗೆ ಪಕ್ಷ ತಜ್ಞರಾಗಬೇಕೆಂದು ಅನಿಸಿತು.

೨. ಯಾವ ಪರಂಪರೆಯನ್ನು ಬೆಳೆಸುವುದು ನಮ್ಮ ಕರ್ತವ್ಯ?

ಉ: ಭಾರತದ ಪಕ್ಷಿ ಲೋಕಕ್ಕೆ ನಾಂದಿ ಹಾಡಿದವರು ಡಾಕ್ಟರ್ ಸಲೀಂ

ಅಲಿಯವರು. ಅವರು ಬೆಳೆಸಿದ ಪಕ್ಷಿ ಪರಂಪರೆ ನಮ್ಮ ಜೊತೆ ಇದೆ. ಅದನ್ನು ಬೆಳೆಸುವುದು ನಮ್ಮ ಕರ್ತವ್ಯ.

೨. ಪ್ರಾಣಿ ಪಕ್ಷಿಗಳ ಬಗ್ಗೆ ನಿಮ್ಮದೇ ಮಾತುಗಳಲ್ಲಿ ಬರೆಯಿರಿ.
ಉ: ನನಗೆ ಹಕ್ಕಿ ಮತ್ತು ಪ್ರಾಣಿಗಳನ್ನು ನೋಡಿದಾಗ ತುಂಬಾ ಸಂತೋಷವಾಗುತ್ತದೆ. ಅವುಗಳ ಜೊತೆ ಸಮಯ ಕಳೆಯುವುದು ನನಗೆ ತುಂಬಾ ಇಷ್ಟ. ನಾನು ಅವುಗಳನ್ನು ತುಂಬಾ ಪ್ರೀತಿಸುತ್ತೇನೆ.

**ಉ) ಪದಗಳಿಗೆ ಅರ್ಥ ಬರೆಯಿರಿ. (Write the word meaning)**

ತಜ್ಞ = ಜ್ಞಾನಿ
ಸಂಸ್ಥೆ = ಸಂಘ
ವೀಕ್ಷಣೆ = ನೋಟ

**ಊ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ. (Split the word)**

ಕರೆದೊಯ್ದರು = ಕರೆದು + ಒಯ್ದರು

ಹಡಗಿನಲ್ಲಿ = ಹಡಗಿನ +ಅಲ್ಲಿ

ಪಾಲಾಯಿತು = ಪಾಲು + ಆಯಿತು

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ